
# ಬೆಳಕಿನ ಸಂಚಲನ

ಸಂ 3, ಸಂ 4 ಆಗಸ್ಟ್ 2015



## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಠಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

### ಗುರೂಜಿ ಕೃಷ್ಣಾನಂದ

(ಅವರ 14 ಮಾರ್ಚ್ 2010ರ ಭಾಷಣದ ಆಯ್ದ ಭಾಗಗಳು)

**ಅನು: ಶ್ರೀದೇವಿ**

ತಮ್ಮ ಜೀವನವನ್ನು ನಿಜವಾಗಿಯೂ ಉತ್ತಮಪಡಿಸಿಕೊಳ್ಳಲು ಬಯಸುವ, ಯಾವಾಗಲೂ ಶಾಂತಿ, ಸಂತೋಷ ಹಾಗೂ ತೃಪ್ತಿಯಿಂದ ಇರಲು ಬಯಸುವ ಒಬ್ಬ ಶ್ರದ್ಧಾವಂತ ವಿದ್ಯಾರ್ಥಿ ಅಥವಾ ವ್ಯಕ್ತಿ, ಧ್ಯಾನ ಮಾಡುವ ಮತ್ತು ಸಕಾರಾತ್ಮಕವಾಗುವುದರ ಜೊತೆಗೆ ಯಾವಾಗಲೂ ಬೆಳಕನ್ನು ತಮ್ಮಲ್ಲಿ ಹೊಂದಿರಬೇಕು ಮತ್ತು ಅದರ ಅರಿವಿನಲ್ಲಿರಬೇಕು. ನಾವು ಬೆಳಕನ್ನು ನಮ್ಮಲ್ಲಿ ಹೊಂದಿದ್ದಾಗ ಬೆಳಕು ನಮ್ಮ ಜೀವನವನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತದೆ. ಯಾವುದು ತಪ್ಪು ಹಾಗೂ ಯಾವುದು ಸರಿ ಎನ್ನುವುದನ್ನು ಬೆಳಕು ನಮಗೆ ತಿಳಿಸುತ್ತದೆ. ಬೆಳಕು ಒಂದು ಸ್ವತಂತ್ರವಾದ ಅಸ್ತಿತ್ವ. ಬೆಳಕಿಗೆ ಒಂದು ವ್ಯಕ್ತಿತ್ವವಿದೆ. ಅದು ದೇವರೇ ಆಗಿದೆ. ನಾವು ಯಾವಾಗಲೂ ಬೆಳಕಿನ ಅರಿವಿನಲ್ಲಿರಬಹುದು ಹಾಗೂ ಅದರ ಜೊತೆ ಸಂವಾದ ಮಾಡಬಹುದು ಮತ್ತು ಪರಸ್ಪರ ಪ್ರತಿಕ್ರಿಯಿಸಬಹುದು. ಪ್ರಶ್ನೆ ಇದ್ದಾಗಲೆಲ್ಲ ನಾವು ಬೆಳಕನ್ನು ಕೇಳಬಹುದು. ಉತ್ತರ ನಮಗೆ ತಪ್ಪದೆ ಸಿಗುತ್ತದೆ. ನಾವು ಇದರ ಜೊತೆ ಪ್ರಯೋಗ ಮಾಡುವುದು ಮಾತ್ರವಲ್ಲದೆ ಪ್ರತಿ ಕ್ಷಣವೂ ಇದನ್ನು ಮಾಡಬಹುದು. ಬೆಳಕು ಒಬ್ಬ ಮಹಾನ್ ಗುರು, ಸಂಗಾತಿ ಹಾಗೂ ಸ್ನೇಹಿತ. ನಾವು ಬೆಳಕನ್ನು ಕಣ್ಣುಮುಚ್ಚಿಕೊಂಡು ನಂಬಬಹುದು. ಬೆಳಕು ಎಂದೂ ನಮ್ಮ ಕೈ ಬಿಡುವುದಿಲ್ಲ. ನಾವು ಬೆಳಕಿನ ಅರಿವಿನಲ್ಲಿರಬಹುದು. ನಾವು ಬೆಳಕನ್ನು ಪ್ರೀತಿಸಬಹುದು. ಬೆಳಕನ್ನು ನಮ್ಮ ಸಂಗಾತಿಯನ್ನಾಗಿ ಮಾಡಿಕೊಳ್ಳಬಹುದು. ಬೆಳಕಿನಲ್ಲಿ ಎಲ್ಲಾ ಉತ್ತರಗಳು ನಮಗೆ ಸಿಗುತ್ತವೆ. ಬೆಳಕು ಅತ್ಯಂತ ಶಕ್ತಿಶಾಲಿ. ಬೆಳಕಿನಿಂದ ಎಲ್ಲಾ ಸಹಾಯ ನಮಗೆ ದೊರೆಯುತ್ತದೆ.

## ಘಟನಾವಳಿಗಳು

### ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ

ಲಕ್ಷಗಟ್ಟಲೆ ಮಕ್ಕಳು ಈಗ ನಿಯತವಾಗಿ ಲೈಟ್ ಚಾನಲ್ ಮಾಡುತ್ತಿದ್ದಾರೆ ಹಾಗೂ ನಿಧಾನವಾಗಿ ಅನೇಕ ಹಿರಿಯರು ಈ ಅಭ್ಯಾಸವನ್ನು ತೆಗೆದುಕೊಳ್ಳುತ್ತಿದ್ದಾರೆ. ಮುಂದಾಳತ್ವ ವಹಿಸಿದ ನಮ್ಮ ಕೆಲವು ಕಾರ್ಯಕರ್ತರಿಂದಾಗಿ, ತಮ್ಮ ಅವಿಶ್ರಾಂತವಾದ ಕೆಲಸದಿಂದ ಸ್ವಲ್ಪ ಬಿಡುವು ಮಾಡಿಕೊಂಡು ಪುಣೆಯ ಬ್ಯಾಂಕೊಂದರ ನೌಕರರು ಹಾಗೂ ಬೆಂಗಳೂರಿನ IT ಸಂಸ್ಥೆಯೊಂದರ ಉದ್ಯೋಗಿಗಳು ಕೆಲವು ಸಮಯ ಬೆಳಕನ್ನು ಚಾನಲ್ ಮಾಡಿದರು. ಈ ಕಾರ್ಯಕರ್ತರಿಗೆ ವಂದನೆಗಳು. 8 ಜನ ಕಾರ್ಯಕರ್ತರ ತಂಡವೊಂದು ಬೆಂಗಳೂರಿನ ಸಮೀಪದ ಪಟ್ಟಣವಾದ ಮಾಗಡಿಗೆ ಹೋಗಿ 75 ಶಾಲೆಗಳ 100 ಶಿಕ್ಷಕರಿಗೆ ತರಬೇತಿ ನೀಡಿದರು.

ನಮ್ಮ ಕಾರ್ಯಕರ್ತರ ಈ ರೀತಿಯ ಮುಂತೊಡಗುವ ಪ್ರಕೃತಿಯಿಂದಾಗಿ ಲೈಟ್ ಚಾನಲಿಂಗ್ ಕೆಲಸ ಬೆಳೆಯುತ್ತದೆ. ಕೆಲವು ನಿಷ್ಠಾವಂತ ಕಾರ್ಯಕರ್ತರು ಈ ಅದ್ಭುತವಾದ ತಂತ್ರವನ್ನು ಕೆಲವು ಶಾಲೆಗಳ ಮಕ್ಕಳಿಗೆ ಹೇಳಿಕೊಡುವುದಕ್ಕೆ ಮುಂದೆಬಂದದ್ದರಿಂದಲೇ ಈ ಕೆಲಸ ಕೆಲವು ವರ್ಷಗಳ ಹಿಂದೆ ಪ್ರಾರಂಭವಾಯಿತು.

ಮಹರ್ಷಿ ಅಮರರವರು ಬೆಳಕು ಮತ್ತು ಬೆಳಕಿನ ಯುಗವನ್ನು ನಮಗೆ ಪರಿಚಯಿಸಿದರು. ಅಧ್ಯಾತ್ಮಿಕತೆ ಮತ್ತು ಜೀವನದ ಬಗ್ಗೆ ನಮಗಿದ್ದ ಅಜ್ಞಾನದ ಅಂಧಕಾರವನ್ನು, ಗುರೂಜಿಯವರ ಮೂಲಕ ನಾವು ಪಡೆದ ಅಮರರವರ ಬೆಳಕು ಹೋಗಲಾಡಿಸಿತು. ಅವರೇ ಗುರೂಜಿಯವರ ಕೆಲಸದ ಹಿಂದಿರುವ ಸ್ಫೂರ್ತಿ. ಪ್ರಾಮಾಣಿಕ ಹಾಗೂ ಬದ್ಧರಾಗಿರುವ ಕಾರ್ಯಕರ್ತರ ಮೂಲಕ ಆ ಕೆಲಸ ಮುಂದುವರೆದು ವಿಸ್ತರಿಸುತ್ತಿದೆ.

## ಬೆಳಕಿನ ಕ್ರಿಯಾಶಕ್ತಿ

### ಮನೋಜ್ ಚೋಪ್ರ; ಅನು: ಶ್ರೀದೇವಿ

ಶಾಲೆಗಳಲ್ಲಿ ಲೈಟ್ ಚಾನಲ್ ಮಾಡುವುದು ನಮ್ಮೆಲ್ಲರಿಗೂ ಒಂದು ಕಲಿಯುವಿಕೆಯ ಅನುಭವ. ಚಾನಲ್ ಮಾಡುವಾಗ ಮಕ್ಕಳಿಗೆ ಅದ್ಭುತವಾದ ಅನುಭವಗಳಾಗಿವೆ. ಚಾನಲಿಂಗ್ ಮುಗಿದ ಮೇಲೆ ಒಬ್ಬ ವಿದ್ಯಾರ್ಥಿಗೆ, ತನ್ನ ಸುತ್ತಲೂ ಇರುವ ಪ್ರತಿಯೊಬ್ಬರೂ ಶಾಂತಿ ಮತ್ತು ಸಂತೋಷವಾಗಿರುವುದು ತಿಳಿಯಿತು. ಮತ್ತೊಬ್ಬ ವಿದ್ಯಾರ್ಥಿಗೆ ಒಂದು ಹೊಸ ಹಾಗೂ ಪ್ರಕಾಶಮಾನವಾದ ಜಗತ್ತಿನ ಅನುಭವವಾಯಿತು. ಅವರ ಪರಿಶುದ್ಧತೆ ಮತ್ತು ಮುಗ್ಧತೆಯಿಂದಾಗಿ ಅಂತಹ ಅಮೂಲ್ಯವಾದ ಅನುಭವಗಳು ಅವರಿಗಾಗುತ್ತವೆ ಎಂದು ನನಗೆ ಅನ್ನಿಸುತ್ತದೆ. ಬಹುಶಃ ಅವರಿಗೆ ಮುಂದೆ ಆಗುವುದು ಗೋಚರಿಸಬಹುದು. ಹತಾಶೆಯಿಂದ ತುಂಬಿದ ಈ ಪ್ರಪಂಚದಲ್ಲಿ ಇಂತಹ ಅನುಭವಗಳು ನಮಗೆ ಒಂದು ಆಶಾಕಿರಣವನ್ನು ನೀಡುತ್ತವೆ. ಹಾಗೂ ಇದು ನಮ್ಮ ಭವಿಷ್ಯ ಉಜ್ವಲವಾಗಿದೆ ಎನ್ನುವುದನ್ನು ದೃಢಪಡಿಸುತ್ತದೆ.

ನಮ್ಮ ಕಾರ್ಯಕರ್ತರು ಅದೇ ಪ್ರೀತಿ ಮತ್ತು ಉತ್ಸಾಹದಿಂದ ಶಾಲೆಗಳಿಗೆ ಭೇಟಿ ನೀಡುವುದನ್ನು ಮುಂದುವರೆಸಿದ್ದಾರೆ. ತಮ್ಮ ಜೀವನದಲ್ಲಿ ಹಲವಾರು ತೊಂದರೆ ಹಾಗೂ ಸವಾಲುಗಳಿದ್ದರೂ ಕೂಡ, ಅವರು ಋಷಿಗಳ ಈ ಮಹತ್ಕಾರ್ಯವನ್ನು ಮುಂದುವರೆಸಿದ್ದಾರೆ. ಅವರು ತಮ್ಮ ಗುರುಗಳ ಕನಸನ್ನು ಜೀವಂತವಾಗಿರಿಸಿದ್ದಾರೆ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಭಾರತ.
ಫೋನ್ : (080) 2846 5280, 99000 75280 (10 AM to 4 PM)
ಇ–ಮೇಲ್ : info@lightagemasters.com info@lightchannels.com
ವೆಬ್‌ಸೈಟ್ : www.lightagemasters.com www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

**ಬೆಂಗಳೂರು**

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ,
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಗುರುವಾರ (ಸಂಜೆ 6:30 - 7:00)
ಮಂಚ್‌ಕಿನ್ಸ್, ನಂ. 890,
38ನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ,
4ನೇ 'T' ಬ್ಲಾಕ್, ಜಯನಗರ
☎ 9902025444 ಶ್ರೀಮತಿ ಶುಭ ಎಸ್.

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ,
ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೆಕರ್

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ,
8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಶನಿವಾರ (ಸಂಜೆ 6:00 - 7:00)
ಶಿಕ್ಷಾ ಸಾಗರ್ ಪ್ರೈಮರಿ ಶಾಲೆ, ನಂ. 77,
5ನೇ ಮುಖ್ಯ ರಸ್ತೆ, ಪೋಸ್ಟಲ್ ಕಾಲೋನಿ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್



ಸಾಂಗ್ಲಿಯಲ್ಲಿನ ಸಾಂಗ್ಲಿ ಅರ್ಬನ್ ಕೋ-ಆಪ್ ಬ್ಯಾಂಕಿನ ನೌಕರರು ಬೆಳಕನ್ನು ಚಾನಲ್ ಮಾಡುತ್ತಿರುವುದು

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಈ ಪ್ರಪಂಚದಲ್ಲಿ ಅಥವಾ ನಮ್ಮಲ್ಲಿ ಅಶುದ್ಧತೆ ಮತ್ತು ಅಸತ್ಯ ಇರುವುದರ ಅರಿವಾದಾಗ, ನಾವು ಅವುಗಳನ್ನು ಮಾನಸಿಕವಾಗಿ ತಿರಸ್ಕರಿಸಬೇಕು. ನಂತರ ನಾವು ಧ್ಯಾನ ಮತ್ತು ಬೆಳಕನ್ನು ಚಾನಲ್ ಮಾಡಿ ಅವುಗಳನ್ನು ಸ್ವಚ್ಛಗೊಳಿಸುತ್ತಾ ಹೋಗಬೇಕು. ಧ್ಯಾನ ಮತ್ತು ಬೆಳಕಿನಿಂದ ಬರುವ ಚೈತನ್ಯಗಳು ನಮ್ಮನ್ನು ಹಾಗೂ ಈ ಪ್ರಪಂಚವನ್ನು ಸ್ವಚ್ಛಗೊಳಿಸಿ ಪರಿವರ್ತನೆಯನ್ನು ತರುತ್ತವೆ.
- ನಾವು ಒಂದು ಬಹಳ ವಿಶೇಷವಾದ ಸಂಕ್ರಮಣದ ಕಾಲದಲ್ಲಿದ್ದೇವೆ. ಅಪರಿಪೂರ್ಣ ಹಾಗೂ ಭ್ರಷ್ಟಾಚಾರ ತುಂಬಿರುವ ವ್ಯವಸ್ಥೆಯಲ್ಲಿ ನಾವು ಬದುಕಬೇಕಾಗಿದೆ. ಮುಂಬರುವ ಒಳ್ಳೆಯ ದಿನಗಳ ಬಗ್ಗೆ ಭರವಸೆಯನ್ನು ಕಳೆದುಕೊಳ್ಳದೆ, ಮೌಲ್ಯಗಳನ್ನು ಆಯ್ಕೆ ಮಾಡಿಕೊಂಡು, ಸುತ್ತಲಿನ ದುರಾಸೆಯ ಹುಚ್ಚುತನ ಮತ್ತು ಹಿಂಸೆಯ ನಡುವೆ ಸಮತೋಲನದಿಂದ ಇರಬೇಕಾಗಿದೆ.
- ದೇವರು, ಪ್ರಕೃತಿ ಮತ್ತು ಇತರರ ಬಗ್ಗೆ ಪ್ರೀತಿ ಇಲ್ಲದಿರುವುದೇ ನಮ್ಮಲ್ಲಿನ ಅಸಾಮರಸ್ಯಕ್ಕೆ ಪ್ರಮುಖ ಕಾರಣ.
- ಸೃಷ್ಟಿಯಲ್ಲಿನ ಸಜೀವ ಅಥವಾ ನಿರ್ಜೀವವಾದ ಪ್ರತಿಯೊಂದೂ ಜೀವಂತವಾಗಿದೆ ಹಾಗೂ ಅವುಗಳಲ್ಲಿ ಸಂವೇದನೆ ಮತ್ತು ಭಾವನೆಗಳಿವೆ! ನಾವು ಅವುಗಳಿಗೆ ಸಂವೇದನಾಶೀಲರಾಗಿರಬೇಕು ಹಾಗೂ ವಿವಿಧ ರೂಪಗಳಲ್ಲಿರುವ ಪ್ರಜ್ಞೆಯನ್ನು ನೋಯಿಸಬಾರದು.
- ಕೋಪ ಅಂತರವನ್ನುಂಟುಮಾಡುತ್ತದೆ. ಕೋಪ ನಮ್ಮಲ್ಲಿ ದುಡುಕು ಹಾಗೂ ಹಗೆತನವನ್ನು ಉಂಟುಮಾಡುತ್ತದೆ. ಕೋಪದಲ್ಲಿ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ. ಇದೆಲ್ಲಾ ತಿಳಿದಿದ್ದರೂ ಕೂಡ ನಾವು ಅದಕ್ಕೆ ಅಧೀನರಾಗುತ್ತೇವೆ.
- ಕೋಪದಲ್ಲಿ ನಾವು ನಮ್ಮ ಸಂಬಂಧಗಳನ್ನು ಕಳೆದುಕೊಳ್ಳುತ್ತೇವೆ, ನಮ್ಮ ಜೀವನವನ್ನು ಕಳೆದುಕೊಳ್ಳುತ್ತೇವೆ ಹಾಗೂ ಆಧ್ಯಾತ್ಮಿಕವಾಗಿ ಕೆಳಗೆ ಬೀಳುತ್ತೇವೆ. ಪ್ರಯತ್ನಿಸಿದರೆ, ನಾವು ಕೋಪವನ್ನು ಜಯಿಸಬಹುದೆಂದು ಮನಗಾಣುತ್ತೇವೆ.

–ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 4956 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 27.20 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಭರವಸೆ

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಸಿರಿಯಾ ದೇಶಕ್ಕೆ ಹತ್ತಿರವಿರುವ ದೇಶವೊಂದರಲ್ಲಿ ನಿರಾಶ್ರಿತರ ಬಿಡಾರಗಳಲ್ಲಿನ ಜೀವನವನ್ನು ವಾರ್ತಾ ವಾಹಿನಿಯೊಂದರಲ್ಲಿ ನೋಡಿದೆ. ದೊಡ್ಡವರು ಯಾವುದೋ ವಿಷಯದ ಬಗ್ಗೆ ಬಹಳ ಗಂಭೀರವಾಗಿ ಚರ್ಚಿಸುತ್ತಿರುವಾಗ, ತಮ್ಮ ಜೀವನದ ಪ್ರಯಾಣದಲ್ಲಿ ಮುಂದಿರುವ ಬೆಟ್ಟದಷ್ಟು ಸಮಸ್ಯೆಗಳ ಅರಿವಿಲ್ಲದೆ, ಕೆಲವು ಮಕ್ಕಳು ಅಲ್ಲಿ ಸೇರಿ ಸಂತೋಷದಿಂದ ಆಟವಾಡುತ್ತಿದ್ದರು. ಅವರಿಗೆ ಮುಂದಿನ ಊಟ ಎಲ್ಲಿಂದ ಸಿಗುತ್ತದೆ? ಶಾಲೆಗಳು ಇರುವುದೇ ಆದರೆ ಯಾವ ಶಾಲೆಗೆ ಅವರು ಹೋಗುತ್ತಾರೆ? ಮುಂಬರುವ ದಿನಗಳಲ್ಲಿ ನಿರೀಕ್ಷಿಸಿರುವ ಅತಿಯಾದ ಚಳಿಯನ್ನು ಹೇಗೆ ತಡೆದುಕೊಳ್ಳುತ್ತಾರೆ? ತಮ್ಮ ತಾಯ್ನಾಡಿಗೆ ಮರಳಲು ಅವರಿಗೆ ಯಾವಾಗಲಾದರೂ ಸಾಧ್ಯವೆ?

ಈ ಮಕ್ಕಳು ಇಂತಹ ಪ್ರಶ್ನೆಗಳ ಬಗ್ಗೆ ಯಾವಾಗಲಾದರೂ ಯೋಚಿಸುತ್ತಾರೆಯೆ? ತಮ್ಮ ಎಲ್ಲಾ ಚಿಂತೆಗಳನ್ನು ತಮ್ಮ ಪೋಷಕರಿಗೆ ಅರ್ಪಿಸಿದ ಮಕ್ಕಳು ತಮ್ಮ ಆಟದಲ್ಲಿ ಮುಳುಗಿ ಆ ಕ್ಷಣವನ್ನು ಸಂತೋಷಿಸುತ್ತಿದ್ದರು.

ನಿರಾಶ್ರಿತರ ಬಿಡಾರದಲ್ಲಿರುವ ಮಕ್ಕಳು ತಮ್ಮ ದಾರಿಯನ್ನು ಈ ಪ್ರಪಂಚದಲ್ಲಿ ಹೇಗೋ ಕಂಡುಕೊಳ್ಳುತ್ತಾರೆ. ಬೆಳಕು ಪ್ರತಿಯೊಬ್ಬರನ್ನೂ ನೋಡಿಕೊಳ್ಳುತ್ತದೆ ಹಾಗೂ ಅವರಿಗೆ ಸಹಾಯ ಮಾಡುತ್ತದೆ. ಆದರೆ ಗೌರವಪೂರ್ಣವಾದ ಉತ್ತಮವಾದ ಜೀವನಕ್ಕೆ ಅವರು ಅರ್ಹರಲ್ಲವೆ? ಈ ಪ್ರಪಂಚದ ಪ್ರಜೆಗಳಾಗಿ, ನಮ್ಮ ಜವಾಬ್ದಾರಿಯೇನು? ಈ ಬಿಡಾರಗಳಲ್ಲಿನ ಜೀವನ ಮಾತ್ರವಲ್ಲ, ಲಕ್ಷಗಟ್ಟಲೆ ಮುಗ್ಧ ಜನರ ಜೀವನವನ್ನು ಬಾಧಿಸುತ್ತಿರುವ, ಈ ಪ್ರಪಂಚದ ಅನೇಕ ಭಾಗಗಳಲ್ಲಿ ಬಹುವ್ಯಾಪಕವಾದ ಹಿಂಸೆ ಮತ್ತು ಅನ್ಯಾಯವನ್ನು ಕೇವಲ ನಮ್ಮ ಮನೆಗಳಲ್ಲಿ ಸುಖವಾಗಿ ಕುಳಿತು ತಾಳ್ಮೆಯಿಂದ ನಾವು ನೋಡುವುದೇ?

ನೇರವಾಗಿ ನಾವು ಏನನ್ನೂ ಮಾಡಲು ಸಾಧ್ಯವಾಗದಿರಬಹುದು. ಆದರೆ ಪ್ರಪಂಚದಲ್ಲಿ ನಡೆಯುತ್ತಿರುವ ಘಟನೆಗಳ ಬಗ್ಗೆ ಉದಾಸೀನರಾಗಿರಲೂ ಸಾಧ್ಯವಿಲ್ಲ. ಈ ಜನರಿಗಾಗಿ ನಾವು ಸ್ಪಂದಿಸಬೇಕಾಗಿದೆ ಹಾಗೂ ಯೋಚಿಸಬೇಕಾಗಿದೆ. ನಾವು ಹಾಗೆ ಮಾಡಿದಾಗ, ಅವರ ಕಷ್ಟದ ಹೊರೆಯನ್ನು ಒಂದು ರೀತಿಯಲ್ಲಿ ನಾವು ಹಂಚಿಕೊಳ್ಳುತ್ತೇವೆ. ಈ ವಿಷಯಗಳನ್ನು ತಾರ್ಕಿಕವಾಗಿ ವಿವರಿಸುವುದು ಕಷ್ಟ ಆದರೆ ಇದು ಹೇಗೋ ಸಹಾಯ ಮಾಡುತ್ತದೆ. ನಮ್ಮ ಪ್ರೀತಿಯ ಕಂಪನಗಳು ಅವರಿಗೆ ತಲುಪಿ ವಿಶ್ವವು ಅವರ ಕಷ್ಟಗಳನ್ನು ಪರಿಹಾರ ಮಾಡಲು ಅನುಕೂಲ ಮಾಡಿಕೊಡಬಹುದು. ವಿಶ್ವವು ಜನರ ಮೂಲಕ ಕಾರ್ಯ ಮಾಡಬೇಕಾಗಿದೆ.

ನನ್ನ ಗುರು ಗುರೂಜಿ ಕೃಷ್ಣಾನಂದರವರಿಂದ ಪಡೆದ ಜ್ಞಾನದ ಆಧಾರದ ಮೇಲೆ ಇದನ್ನು ನಾನು ಹೇಳುತ್ತಿದ್ದೇನೆ. ಪ್ರಪಂಚಕ್ಕಾಗಿ ಭಾವುಕರಾಗುವುದನ್ನು ಹಾಗೂ ಯೋಚಿಸುವುದನ್ನು ಅವರು ನಮಗೆ ಕಲಿಸಿದರು. ಹಾಗೂ ಪ್ರಪಂಚಕ್ಕೆ ಸಹಾಯ ಮಾಡಲು ಬಹಳ ಮುಖ್ಯವಾದ ಮತ್ತು ಪರಿಣಾಮಕಾರಿಯಾದ ರೀತಿಯನ್ನು ಅವರು ನಮಗೆ ನೀಡಿದರು. ಲೈಟ್ ಚಾನಲ್ ಮಾಡುವುದನ್ನು ಕಲಿಸಿಕೊಟ್ಟರು. ನಾವು ಬೆಳಕನ್ನು ಇಡೀ ಪ್ರಪಂಚಕ್ಕೆ ಹರಡಬಹುದು ಹಾಗೂ ನಿರಾಶ್ರಿತರ ಬಿಡಾರದಲ್ಲಿರುವ ಜನರಿಗೆ, ಯುದ್ಧದಿಂದ ಜರ್ಜರಿತವಾದ ಸ್ಥಳಗಳಲ್ಲಿನ ಜನರಿಗೆ, ಅನ್ಯಾಯ ಮತ್ತು ಹಿಂಸೆಯನ್ನು ಅನುಭವಿಸುತ್ತಿರುವ ಜನರಿಗೆ ಹೆಚ್ಚು ಬೆಳಕನ್ನು ನಾವು ಕಳುಹಿಸಬಹುದು. ಉತ್ತಮ ಪ್ರಪಂಚಕ್ಕೆ ಬೆಳಕೇ ನಮಗೆ ಭರವಸೆ. ಈಗ ಬಗೆಹರಿಸಲು ಸಾಧ್ಯವಿಲ್ಲದಂತೆ ಕಾಣುವ ಈ ಜಟಿಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಬೆಳಕೇ ನಮಗೆ ಭರವಸೆ. ಎಲ್ಲಾ ಪರಿಹಾರಗಳು ಬೆಳಕಿನಲ್ಲಿವೆ. ಹೆಚ್ಚು ಬೆಳಕನ್ನು ತಂದು ಹರಡುವ ಈ ಸದ್ದಿಲ್ಲದ ಪ್ರಯತ್ನದಲ್ಲಿ ಹೆಚ್ಚು ಹೆಚ್ಚು ಜನರು ಸೇರಬೇಕಾಗಿದೆ. ನಮ್ಮಿಂದ ಹರಡಿದ ಬೆಳಕು ಜನರನ್ನು ಪ್ರವೇಶಿಸಿ ಅವರು ಜಾಗೃತರಾಗಲು ಹಾಗೂ ಬದಲಾಗಲು ಸಹಾಯಮಾಡುತ್ತದೆ. ಹೆಚ್ಚು ಹೆಚ್ಚು ಜನರು ಪರಿವರ್ತನೆಗೊಂಡಾಗ, ಸಕಾರಾತ್ಮಕ ಶಕ್ತಿಗಳು ಬಲಗೊಳ್ಳುತ್ತವೆ ಹಾಗೂ ಹಿಂಸೆ ಮತ್ತು ಅನ್ಯಾಯದ ಹಿಂದೆ ಇರುವ ಶಕ್ತಿಗಳು ದುರ್ಬಲಗೊಂಡು, ಅಂತಿಮವಾಗಿ ನಾಶವಾಗುತ್ತವೆ.

ದಿವ್ಯವಾದ ಭವಿಷ್ಯವು ನಮ್ಮೆಲ್ಲರಿಗಾಗಿ ಕಾಯುತ್ತಿದೆ.

ಹೆಚ್ಚು ಹೆಚ್ಚು ಜನರು ಈ ವಾಸ್ತವಕ್ಕೆ ಜಾಗೃತಗೊಂಡು ಬೆಳಕನ್ನು ಅವಲಂಬಿಸಬೇಕಾಗಿದೆ. ಅದೇ ನಮ್ಮ ಏಕಮಾತ್ರ ಭರವಸೆ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ಶನಿವಾರ (ಸಂಜೆ 7:30 - 8:30)
ಗುರುದ್ವಾರ ಸಾಹಿಬ್,
ಆಂಜನೇಯ ದೇವಸ್ಥಾನದ ಎದುರು,
ಅಶ್ವತ್ಥ ನಗರ ಮುಖ್ಯ ರಸ್ತೆ, ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್

**ಸೋಲಾಪೂರ್**
ಸೋಮವಾರ ಮತ್ತು ಗುರುವಾರ
(ಸಂಜೆ 7:00 - 7:15)
ಬಾಲಗಣೇಶ್ ಮಂದಿರ, ಬುಶರ್ ಪೇಠ್,
ಮೊಹೋಲ್
☎ 09860967066, ಶ್ರೀ ವಿವೇಕಾನಂದ ಸ್ವಾಮಿ
☎ 09970800279, ಶ್ರೀಮತಿ ಸ್ವರೂಪ ಸ್ವಾಮಿ

**ಚೆನ್ನೈ**
ಭಾನುವಾರ (ಬೆಳಿಗ್ಗೆ 10:00 -10:30)
ನಂ. 481, ಸಾಯಿಪ್ರೇಮ್, 19 ನೇ ರಸ್ತೆ,
4ನೇ ಸೆಕ್ಟರ್, ಕೆ.ಕೆ. ನಗರ
☎ 9444880409, ಶ್ರೀಮತಿ ರಾಜಲಕ್ಷ್ಮಿ ಆರ್.

**ಪುಣೆ**
ಶನಿವಾರ (ಸಂಜೆ 6:30 - 7:00)
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ, ಪುಣೆ - 411016
☎ 9011038169, ಶ್ರೀ ಆಶುತೋಶ್ ನವನ್‌ಗುಲ್


ಗುರುವಾರ (ಮಧ್ಯಾಹ್ನ 2:30 - 3:00)
ಸಿಂಧಿ ಮಂದಿರ, ಸತ್ನಮ್ ಟೆಕ್ಸ್‌ಟೈಲ್ ಪಕ್ಕ,
ಶಿವಸೇನ ಕಛೇರಿಯ ಸಮೀಪ, ಉರುಲಿ ಕಾಂಚನ್,
ಹವೇಲಿ ಜಿಲ್ಲೆ, ಪುಣೆ - 412202
☎ 9822973632, ಶ್ರೀ ಗೋರಕ್ಷ್ ಮಹಾದಿಕ್

**ವಿಶಾಖಪಟ್ಟಣ**
ಶನಿವಾರ (ಸಂಜೆ 7:00 - 7:30)
ಮನೆ ನಂ. 14-339/19, ಫ್ಲಾಟ್ ನಂ. 207,
ಶ್ರೀ ಮಿತ್ರ ಹೈಟ್ಸ್, ಬಾಲಾಜಿ ಗಾರ್ಡನ್,
ಗೋಪಾಲಪಟ್ನಂ, APRTC ಬಸ್ ಡಿಪೋ ಎದುರು
☎ 9848628324, ಶ್ರೀ ವಿ. ಹರಿಕೃಷ್ಣನ್

**ಮೀರಜ್**
ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗಲ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಶ್ ನಗರ ಪೋಸ್ಟ್
☎ 9822421463, ಶ್ರೀ ಮಹಾಜನ್






## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

18ನೇ ಮೇ 2015, ಗುರೂಜಿಯವರ ಜನ್ಮ ದಿನೋತ್ಸವದಂದು ನನ್ನ ಚಿಕ್ಕಮ್ಮ ಮತ್ತು ಚಿಕ್ಕಪ್ಪ ತಮ್ಮ ಮನೆಯಲ್ಲಿ ಲೈಟ್ ಚಾನಲ್ ಮಾಡಬೇಕೆಂದು ನನ್ನಲ್ಲಿ ಕೇಳಿಕೊಂಡರು. ನಾನು ಗುರೂಜಿ ಮತ್ತು ಅಮರರವರ ಭಾವಚಿತ್ರಗಳ ಮುಂದೆ ನಿಂತು ಅವರನ್ನು ಪ್ರಾರ್ಥಿಸಿದೆ. ಮನೆ ತುಂಬಾ ಪ್ರಖರವಾದ ಬಿಳಿ ಬೆಳಕು ತುಂಬಿತು ಮತ್ತು ನನ್ನಲ್ಲೂ ಆ ಬಿಳಿ ಬೆಳಕು ಪ್ರವೇಶಿಸಿತು. 'ದಯಮಾಡಿ ನಿಮ್ಮ ಇರುವಿಕೆಯ ಅನುಭವವನ್ನು ಕೊಡಿ' ಎಂದು ಕೇಳಿದೆ. ಆಗ ಗುರೂಜಿಯವರು ನನ್ನ ಕೈಯನ್ನು ಸ್ಪರ್ಶಿಸಿದರು. ಗುರೂಜಿಯವರಿಂದ ಬಂದ ಬೆಳಕು ನನ್ನಲ್ಲಿ ಪ್ರವೇಶಿಸಿತು ಹಾಗೂ ನಾನು ಬೆಳಕಾದೆ. ನನ್ನ ದೇಹ ಇಲ್ಲದಿರುವಂತೆ ಭಾಸವಾಯಿತು. ಇದೊಂದು ರೋಮಾಂಚನಕಾರಿ ಅನುಭವವಾಗಿತ್ತು ಮತ್ತು ನನಗೆ ಅದರಿಂದ ಹೊರಗೆ ಬರಬೇಕೆನಿಸಲಿಲ್ಲ.

–ಅನೀಶ ಪತಿ, ಲೈಟ್ ಚಾನಲ್

2013ರ ಮೇ ತಿಂಗಳಿನಲ್ಲಿ ಸಂದರ್ಶನಕ್ಕೆ ಹಾಜರಾಗುವ ಮೊದಲು, ಸಹಾಯಕ್ಕಾಗಿ ಬೆಳಕನ್ನು ಪ್ರಾರ್ಥಿಸಿದೆ. ಸಂದರ್ಶನದಲ್ಲಿ ನನ್ನ ಭಾಗವಹಿಕೆಯ ಬಗ್ಗೆ ನನಗೆ ತೃಪ್ತಿ ಇಲ್ಲದಿದ್ದರೂ ನನಗೆ ಕೆಲಸ ಸಿಕ್ಕಿತು. ಗ್ರಾಮೀಣ ಪ್ರದೇಶದಲ್ಲಿ ಕೃಷಿ ಮತ್ತು ಹಣಕಾಸಿನ ಅಧಿಕಾರಿಯಾಗಿ ಕೆಲಸ ನಿರ್ವಹಿಸುವುದು ಒಂದು ಸವಾಲೇ ಸರಿ. ಪ್ರಾರಂಭದಲ್ಲಿ ನಾನು ಬಹಳಷ್ಟು ಕಿರುಕುಳವನ್ನು ಎದುರಿಸಿದೆ. ನನ್ನ ದಿನ ನಿತ್ಯದ ಕೆಲಸಗಳಲ್ಲಿ ಬರುವ ಸವಾಲುಗಳನ್ನು ನಿರ್ಭೀತಿಯಿಂದ ಎದುರಿಸಲು ಲೈಟ್ ಚಾನಲಿಂಗ್ ನನಗೆ ಧೈರ್ಯ ನೀಡಿದೆ ಹಾಗೂ ಸುತ್ತ ಮುತ್ತಲಿನ ನಕಾರಾತ್ಮ ಕತೆಗಳನ್ನು ನಿರ್ಮೂಲ ಮಾಡಲೂ ಸಹಾಯ ಮಾಡಿದೆ. ಕಷ್ಟಕರ ಸನ್ನಿವೇಶಗಳನ್ನು ಸಮಾಧಾನದಿಂದ ನಿಭಾಯಿಸಲೂ ನನಗೆ ಸಾಧ್ಯವಾಗಿದೆ. ಧ್ಯಾನ ಮತ್ತು ಆಧ್ಯಾತ್ಮಿಕ ಪ್ರಗತಿಗೆ ಸಹಾಯವಾಗುವಂತಹ ಸಕಾರಾತ್ಮಕ ವಾತಾವರಣದಲ್ಲಿ ಇರಲು ನನಗೆ ಸಾಧ್ಯವಾಗಿದೆ. ಬೆಳಕು ಯಾವಾಗಲೂ ನನ್ನನ್ನು ಗಮನಿಸುತ್ತಿರುತ್ತದೆ ಮತ್ತು ರಕ್ಷಿಸುತ್ತಿದೆ. ನನ್ನ ಎಲ್ಲಾ ಪ್ರಶ್ನೆಗಳಿಗೆ ಬೆಳಕಿನಲ್ಲಿ ಉತ್ತರಗಳಿವೆ ಮತ್ತು ಸಮಸ್ಯೆಗಳಿಗೆ ಪರಿಹಾರಗಳೂ ಸಹ ಇವೆ.

–ಅವಿನಾಶ್ ಕುಮಾರ್, ಲೈಟ್ ಚಾನಲ್

ವಿಶ್ವ ಚಾನಲ್ಸ್ ದಿನಕ್ಕೆ ಮೂರು ದಿನಗಳು ಇರುವಾಗ ನಾನು ಮತ್ತು ನನ್ನ ಪತ್ನಿ ಅನಾರೋಗ್ಯದಿಂದ ಬಳಲುತ್ತಿದ್ದೆವು. ಆ ವಿಶೇಷ ದಿನಕ್ಕಾಗಿ ನಮ್ಮ ಕೆಲಸಗಳನ್ನು ಹೇಗೆ ಪೂರ್ತಿ ಮಾಡುತ್ತೇವೆ ಎನ್ನುವ ಅನುಮಾನವಿತ್ತು. ಆ ದಿನ ಬೆಳಿಗ್ಗೆ ಕೆಲಸ ಪ್ರಾರಂಭಿಸುವ ಮುನ್ನ ಮಾಷ್ಟರ್ ವಿ ಮತ್ತು ಋಷಿಗಳನ್ನು ಆ ದಿನ ಸುಗಮವಾಗಿ ಸಾಗಲಿ ಎಂದು ನಾನು ಪ್ರಾರ್ಥಿಸಿದೆ. ದಿನವಿಡೀ, ಸಮಯಕ್ಕೆ ಸರಿಯಾಗಿ ಬೇರೆ ಬೇರೆ ಶಾಲೆಗಳನ್ನು ತಲುಪಿ, ನಿಗದಿಯಾದ ಎಲ್ಲಾ ಸೆಷನ್‌ಗಳನ್ನು ಮುಗಿಸಿದೆವು. ನಮ್ಮ ಅನಾರೋಗ್ಯದ ನಡುವೆಯೂ ನಮಗೆ ಯಾವ ತೊಂದರೆಗಳಿಲ್ಲದೆ ಆ ದಿನ ಸರಾಗವಾಗಿ ಸಾಗಿತು. ನಾನು ಸಂತುಷ್ಟನಾಗಿದ್ದೆ. ದಿನವಿಡೀ ಚೈತನ್ಯವನ್ನು ನನಗೆ ನೀಡಿದ್ದಕ್ಕಾಗಿ ಮಾಷ್ಟರ್ ವಿ ಮತ್ತು ಋಷಿಗಳಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅಂದಿನಿಂದ ಹೆಚ್ಚು ಪ್ರಯಾಸಪಡದೆ ಸಂತೋಷದಿಂದ ಲೈಟ್ ಚಾನಲಿಂಗ್ ಕೆಲಸ ಮಾಡುವುದಕ್ಕೆ ನನಗೆ ಸಾಧ್ಯವಾಗಿದೆ ಮತ್ತು ಇದು ನನಗೆ ಆನಂದವನ್ನು ನೀಡಿದೆ.

–ರಮೇಶ್ ಭೋಸೆಕರ್, ಕಾರ್ಯಕರ್ತ

ವಿಶ್ವ ಚಾನಲ್ಸ್ ದಿನದಂದು ಎಲ್ಲಾ ಸೆಷನ್‌ಗಳು ನನಗೆ ಸಂತೋಷವನ್ನು ತಂದು ಕೊಟ್ಟವು. ಶಾಲೆಯೊಂದರಲ್ಲಿ ಎಲ್ಲಾ ವಿದ್ಯಾರ್ಥಿಗಳು ಶೇಕಡ 100ರಷ್ಟು ಭಾಗವಹಿಸಿದ್ದನ್ನು ನೋಡಿದೆ. 'ನಾನೆಲ್ಲಿದ್ದೇನೆಂದು ನನಗೆ ಗೊತ್ತಾಗುತ್ತಿಲ್ಲ', ಎಂದು ಹುಡುಗಿಯೊಬ್ಬಳು ತನ್ನ ಅನುಭವವನ್ನು ಹಂಚಿಕೊಳ್ಳುತ್ತಾ ಹೇಳಿದಳು. ಅವರೆಲ್ಲರೂ ಬಹಳ ಮುಗ್ಧತೆ ಮತ್ತು ಶುದ್ಧತೆಯಿಂದ ಚಾನಲ್ ಮಾಡುತ್ತಿರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು.

–ಇಂದು ರಾವ್, ಕಾರ್ಯಕರ್ತೆ

GKVKಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಬಹಳ ಚೆನ್ನಾಗಿ ಭಾಗ ವಹಿಸಿದರು. ಅವರು ತಮ್ಮ ಕಣ್ಣುಗಳನ್ನು ತೆರೆಯಲು ಬಯಸಲಿಲ್ಲ. ತೋಟಗಾರಿಕೆ ಇಲಾಖೆಯ ಮುಖ್ಯಸ್ಥರು 300 ವರ್ಷಗಳಷ್ಟು ಹಳೆಯದಾದ ಆಲದ ಮರದ ಕೆಳಗಡೆಯೇ ಲೈಟ್ ಚಾನಲಿಂಗ್ ಸೆಷನ್‌ಅನ್ನು ಮಾಡಬೇಕೆಂದು ಬಯಸಿದರು. ಆ ಆಲದ ಮರ ನಮ್ಮ ಜೊತೆ ಮಾತನಾಡಲು ಪ್ರಾರಂಭಿಸಿತು! ಆ ಮರ ಅಗಾಧವಾದ ಪ್ರೀತಿಯನ್ನು ಹೊರಹೊಮ್ಮುತ್ತಿರುವುದನ್ನು ನಾನು ಮತ್ತು ಶೋಭನ ಗ್ರಹಿಸಿದೆವು. ಅದನ್ನು ತಿಳಿದು ನಮಗೆ ಕಣ್ಣೀರು ಬಂತು. ಆ ಅನುಭವ ಅಷ್ಟೊಂದು ಸುಂದರವಾಗಿತ್ತು. ಜೇನು ನೊಣಗಳೂ ಕೂಡ ನಮಗೆ ತೊಂದರೆ ಕೊಡಲಿಲ್ಲ. ಪ್ರತಿಯೊಂದು ಎಲೆ, ಪ್ರತಿಯೊಂದು ಕಾಂಡವೂ ಪ್ರೀತಿಯನ್ನು ಹೊರಸೂಸುತ್ತಿತ್ತು. ಸುಮಾರು ಹತ್ತು ಜನರು ಬೆಳಕನ್ನು ಚಾನಲ್ ಮಾಡುತ್ತಿದ್ದರು, ಆದರೆ ಆ ಮರ ಅತಿ ಹೆಚ್ಚು ಆನಂದಪಡುತ್ತಿತ್ತು. ನನಗೆ ನಿಜವಾಗಿಯೂ ರೋಮಾಂಚನವಾಯಿತು.

–ಮಾಲಾ ಸುರೇಶ್, ಕಾರ್ಯಕರ್ತೆ

ನಿಯತವಾಗಿ ಲೈಟ್ ಚಾನಲಿಂಗ್ ಮಾಡುತ್ತಿರುವುದರಿಂದ ನನ್ನ ಜ್ಞಾಪಕ ಶಕ್ತಿ ಉತ್ತಮಗೊಂಡಿದೆ. ನನಗೆ ದಿಕ್ಕು ತೋಚದ ಕ್ಷಣಗಳಲ್ಲಿ, ಲೈಟ್ ಚಾನಲಿಂಗ್ ಅಭ್ಯಾಸದಲ್ಲಿ ನನ್ನ ಮನಸ್ಸನ್ನು ತೊಡಗಿಸಿಕೊಳ್ಳುತ್ತೇನೆ ಹಾಗೂ ಇದರಿಂದ ಶಾಂತಿಯನ್ನು ಅನುಭವಿಸುತ್ತೇನೆ. ನನ್ನನ್ನು ನೋಡಿ ನನ್ನ ಕುಟುಂಬದವರೂ ಸಹ ಲೈಟ್ ಚಾನಲಿಂಗ್ ಮಾಡುವುದಕ್ಕೆ ಪ್ರಾರಂಭಿಸಿದ್ದಾರೆ.

–ಎನ್ ಶಿವ ಸೆಲ್ವಿ, ಹನ್ನೊಂದನೆಯ ತರಗತಿ, ವಲ್ಲಿಯಮ್ಮಾಳ್ ಗರ್ಲ್ಸ್ ಹೈಸ್ಕೂಲ್, ಕುಲಸೇಕರನ್ ಪಟ್ಟಿನಮ್

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು : ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ